## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ಎಂ. ಸಲೀಂ ಪಾಷಾ, ಕಾರ್ಯನಿರ್ವಾಹಕ ಅಧಿಕಾರಿ ತಾಪಂ., ಹರಪನಹಳ್ಳಿ ಮತ್ತು ಶ್ರೀ ಶಿಖರಪ್ಪ ಪ್ರಭಾರ ಪಿಡಿಓ ಮತ್ತು ಕಾರ್ಯದರ್ಶಿ ಮತ್ತಿಹಳ್ಳಿ ಗ್ರಾ.ಪಂ., ಹರಪ್ಪನಹಳ್ಳಿ ತಾಲ್ಲೂಕು, ಹಾಗೂ ಶ್ರೀ ಹೆಚ್.ಕಲ್ಲಪ್ಪ, ಕಿ. ಇಂ. ಮತ್ತಿಹಳ್ಳಿ ಗ್ರಾ.ಪಂ., ಹರಪ್ಪನಹಳ್ಳಿ ತಾಲ್ಲೂಕು ಇವರುಗಳನ್ನು ಸೇವೆಯಿಂದ ಅಮಾನತ್ತುಪಡಿಸುವ ಬಗ್ಗೆ

ಓದಲಾಗಿದೆ: ನಿರ್ದೇಶಕರು, ಸಾಮಾಜಿಕ ಪರಿಶೋಧನಾ ನಿರ್ದೇಶನಾಲಯ ಇವರ ಪರಿಶೀಲನಾ ವರದಿ ದಿನಾಂಕ: 20-12-2013.

------

**ಪ್ರಸ್ತಾವನೆ:**

ಹರಪ್ಪನಹಳ್ಳಿ ತಾಲ್ಲೂಕು ಮತ್ತಿಹಳ್ಳಿ ಗ್ರಾಮ ಪಂಚಾಯತಿಯಲ್ಲಿ 2013-14ನೇ ಸಾಲಿನ ಎಂಜಿಎನ್‌ಆರ್‌ಇಜಿಎ ಯೋಜನೆಯಲ್ಲಿ ಯಂತ್ರೋಪಕರಣಗಳನ್ನು ಬಳಸಿ ಕೆಲಸ ನಿರ್ವಹಿಸಿರುವ ಕುರಿತು ಶ್ರೀ ಮಲ್ಲಿಕಾರ್ಜುನಗೌಡ, ಶ್ರೀ ಬಸವರಾಜ್‌ಗೌಡ, ಶ್ರೀ ಕಾಡನಗೌಡ, ಮತ್ತಿಹಳ್ಳಿ ಗ್ರಾಮ ದಾವಣಗೆರೆ ಜಿಲ್ಲೆ ಇವರು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಿಗೆ ಸಲ್ಲಿಸಿರುವ ದೂರಿಗೆ ಸಂಬಂಧಿಸಿದಂತೆ ಪರಿಶೀಲಿಸಿ ವರದಿ ನೀಡಲು ಸರ್ಕಾರ ನಿಯೋಜಿಸಿದ ತಂಡವು ಮತ್ತಿಹಳ್ಳಿ ಗ್ರಾಮ ಪಂಚಾಯತಿಗೆ ಭೇಟಿ ನೀಡಿ ತನಿಖೆ ನಡೆಸಿ ಪರಿಶೀಲನಾ ವರದಿಯನ್ನು ಮೇಲೆ ಓದಲಾದ ದಿನಾಂಕ: 20-12-2013 ರಂದು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಸದರಿ ವರದಿಯನ್ನು ಪರಿಶೀಲಿಸಲಾಗಿ 2013-14ನೇ ಸಾಲಿನ ಎಂಜಿಎನ್‌ಆರ್‌ಇಜಿಎ ಯೋಜನೆಯಡಿಯಲ್ಲಿ ಹರಪ್ಪನಹಳ್ಳಿ ತಾಲ್ಲೂಕು ಮತ್ತಿಹಳ್ಳಿ ಗ್ರಾಮ ಪಂಚಾಯತಿಯಲ್ಲಿ ದನದ ಓಣಿ ದಾರಿಯಲ್ಲಿ ಚೆಕ್‌ಡ್ಯಾಂ ಕಾಮಗಾರಿ ಮತ್ತು ಗ್ರಾಮ ಪಂಚಾಯತಿ ಹಿಂಭಾಗವಿರುವ ಹುಬ್ಬಳ್ಳಿ ತಿಂದಪ್ಪನ ಕಣದಿಂದ ಮುದೇತ್ರ ಕೆಂಚಪ್ಪನ ಹೊಲದವರೆಗೆ ರಸ್ತೆ ನಿರ್ಮಾಣ ಕಾಮಗಾರಿಯಲ್ಲಿ ಯಂತ್ರೋಪಕರಣವನ್ನು ಬಳಸಿ ಕೆಲಸ ನಿರ್ವಹಿಸಿರುವ ಕಾಮಗಾರಿಗಳಲ್ಲಿ ನಡೆದಿರುವ ಅವ್ಯವಹಾರಗಳಲ್ಲಿ ಈ ಕೆಳಕಂಡ ಅಧಿಕಾರಿ/ನೌಕರರುಗಳಾದ :

(1) ಶ್ರೀ ಎಂ. ಸಲೀಂ ಪಾಷಾ, ಕಾರ್ಯನಿರ್ವಾಹಕ ಅಧಿಕಾರಿ ತಾಪಂ., ಹರಪನಹಳ್ಳಿ
(2) ಶ್ರೀ ಶಿಖರಪ್ಪ ಪ್ರಭಾರ ಪಿಡಿಓ ಮತ್ತು ಕಾರ್ಯದರ್ಶಿ ಮತ್ತಿಹಳ್ಳಿ ಗ್ರಾ.ಪಂ., ಹರಪ್ಪನಹಳ್ಳಿ ತಾಲ್ಲೂಕು
(3) ಶ್ರೀ ಹೆಚ್.ಕಲ್ಲಪ್ಪ, ಕಿ. ಇಂ. ಮತ್ತಿಹಳ್ಳಿ ಗ್ರಾ.ಪಂ., ಹರಪ್ಪನಹಳ್ಳಿ ತಾಲ್ಲೂಕು

ಇವರುಗಳ ಭಾಗಿಯಾಗಿರುವುದರಿಂದ ಸದರಿ ಅಧಿಕಾರಿ/ನೌಕರರುಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಮೇಲೆ ಓದಲಾದ ದಿನಾಂಕ: 20-12-2013 ರ ಪರಿಶೀಲನಾ ವರದಿಯಲ್ಲಿ ನಿರ್ದೇಶಕರು, ಸಾಮಾಜಿಕ ಪರಿಶೋಧನಾ ನಿರ್ದೇಶನಾಲಯ ಇವರು ತಿಳಿಸಿರುತ್ತಾರೆ.

ನಿರ್ದೇಶಕರು, ಸಾಮಾಜಿಕ ಪರಿಶೋಧನಾ ನಿರ್ದೇಶನಾಲಯ ಇವರ ವರದಿಯನ್ನು ಪರಿಶೀಲಿಸಲಾಗಿ ಈ ಪ್ರಕರಣದಲ್ಲಿ ಮೇಲ್ಕಂಡ ಅಧಿಕಾರಿ/ನೌಕರರುಗಳು ಅವ್ಯವಹಾರಗಳಲ್ಲಿ ಭಾಗಿಯಾಗಿರುವುದು ಮತ್ತು ಕರ್ತವ್ಯಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ ಅವರುಗಳ ವಿರುದ್ಧದ ಇಲಾಖಾ ವಿಚಾರಣೆ ಬಾಕಿ ಇಟ್ಟು ಸೇವೆಯಿಂದ ಅಮಾನತ್ತು ಪಡಿಸಲು ಸರ್ಕಾರವು ತೀರ್ಮಾನಿಸಿ ಈ ಮುಂದಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 232 ವಿಸೇಬಿ 2013 ಬೆಂಗಳೂರು ದಿನಾಂಕ:21-01-2014.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಸರ್ಕಾರವು ಕರ್ನಾಟಕ ನಾಗರೀಕ ಸೇವಾ(ವನಿಮೇ) ನಿಯಮಗಳು 1957ರ ನಿಯಮ 10(1)(ಡಿ) ರಡಿ ಪ್ರದತ್ತವಾದ ಅಧಿಕಾರದನ್ವಯ ಈ ಕೆಳಕಂಡ ಅಧಿಕಾರಿ/ನೌಕರರುಗಳಾದ :-

(1) ಶ್ರೀ ಎಂ. ಸಲೀಂ ಪಾಷಾ, ಕಾರ್ಯನಿರ್ವಾಹಕ ಅಧಿಕಾರಿ ತಾಪಂ., ಹರಪ್ಪನಹಳ್ಳಿ
(2) ಶ್ರೀ ಶಿಖರಪ್ಪ ಪ್ರಭಾರ ಪಿಡಿಓ ಮತ್ತು ಕಾರ್ಯದರ್ಶಿ ಮತ್ತಿಹಳ್ಳಿ ಗ್ರಾ.ಪಂ., ಹರಪ್ಪನಹಳ್ಳಿ ತಾಲ್ಲೂಕು
(3) ಶ್ರೀ ಹೆಚ್.ಕಲ್ಲಪ್ಪ, ಕಿ. ಇಂ. ಮತ್ತಿಹಳ್ಳಿ ಗ್ರಾ.ಪಂ., ಹರಪ್ಪನಹಳ್ಳಿ ತಾಲ್ಲೂಕು

ಇವರುಗಳು ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ ಇಲಾಖಾ ವಿಚಾರಣೆಯನ್ನು ಬಾಕಿ ಇಟ್ಟು ತಕ್ಷಣದಿಂದ ಜಾರಿಗೆ ಬರುವಂತೆ ಸೇವೆಯಿಂದ ಅಮಾನತ್ತುಪಡಿಸಿದೆ.

ಅಮಾನತ್ತಿನ ಅವಧಿಯಲ್ಲಿ ಸದರಿ ಅಧಿಕಾರಿ/ನೌಕರರು ನಿಯಮಾನುಸಾರ ಜೀವನಾಧಾರ ಭತ್ಯೆಗೆ ಅರ್ಹರಿರುತ್ತಾರೆ.

ಅಮಾನತ್ತಿನ ಅವಧಿಯಲ್ಲಿ ಸದರಿ ಅಧಿಕಾರಿ/ನೌಕರರು ಸಕ್ಷಮ ಪ್ರಾಧಿಕಾರದ ಅನುಮೋದನೆ ಇಲ್ಲದೆ ಕೇಂದ್ರ ಸ್ಥಾನವನ್ನು ಬಿಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಚಂದ್ರಶೇಖರ್),
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಆಯುಕ್ತರು ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ.
3. ನಿರ್ದೇಶಕರು, ಸಾಮಾಜಿಕ ಪರಿಶೋಧನಾ ನಿರ್ದೇಶನಾಲಯ ಬೆಂಗಳೂರು.
4. ಸಂಬಂಧಿಸಿದ ಅಧಿಕಾರಿ/ನೌಕರರಿಗೆ (ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ದಾವಣಗೆರೆ ಇವರ ಮುಖಾಂತರ)

**ಪ್ರತಿಯನ್ನು:**

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು
2. ಸರ್ಕಾರದ ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ(ಪಂ.ರಾಜ್)/ಅಪರ ಕಾರ್ಯದರ್ಶಿ (ಆಡಳಿತ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಇವರ ಆಪ್ತ ಶಾಖೆಗೆ.
3. ವಿಶೇಷಾಧಿಕಾರಿ, ಗಣಕ ಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
4. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.